ಶ್ರೀ ಸಿದ್ದರಾಮಯ್ಯ : ಏನೇನು ಕೆಲಸಗಳನ್ನು ಮಾಡಬೇಕೋ ಅವೆಲ್ಲವನ್ನು ಮಾಡೋಣ.

ಅಧ್ಯಕ್ಷರು : O.K. ಮಾನ್ಯ ವೆಂಕಟೇಶ್‌ರವರೆ ತಾವು ಪ್ರಶ್ನೆಯನ್ನು ಕೇಳಿ.

ಅಗ್ನಿಶಾಮಕ ಠಾಣೆ

36(652) ಶ್ರೀ ವೆಂಕಟೇಶ್.ಕೆ. (ಪಿರಿಯಾಪಟ್ಟಣ)

ಅ) ಪಿರಿಯಾಪಟ್ಟಣ ತಾಲ್ಲೂಕು, ಬೆಟ್ಟದಪುರ ಗ್ರಾಮಕ್ಕೆ ಅಗ್ನಿಶಾಮಕ ಠಾಣೆ ಮಂಜೂರು ಮಾಡುವ ಬೇಡಿಕೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ ಬೆಟ್ಟದಪುರದಲ್ಲಿ ತುರ್ತಾಗಿ ಅಗ್ನಿಶಾಮಕ ಠಾಣೆ ಮಂಜೂರು ಮಾಡಲಾಗುವುದೇ?

ಶ್ರೀ ಕೆ.ಜೆ.ಜಾರ್ಜ್ (ಮಾನ್ಯ ಗೃಹ ಸಚಿವರು)

ಅ) ಹೌದು

ಆ) ಕರ್ನಾಟಕ ಅಗ್ನಿಶಾಮಕ ಮತ್ತು ತುರ್ತು ಸೇವಾ ಇಲಾಖೆಯ ವಿಶೇಷ ಅಭಿವೃದ್ಧಿ ಯೋಜನೆಯ ಕೆ–ಸೆಫ್–2010ರಡಿಯಲ್ಲಿ ರಾಜ್ಯದ ಎಲ್ಲಾ 176 ತಾಲ್ಲೂಕು ಕೇಂದ್ರಗಳಲ್ಲಿ ಅಗ್ನಿಶಾಮಕ ಠಾಣೆಗಳನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ. ಪ್ರಸ್ತುತ 156 ತಾಲ್ಲೂಕುಗಳಲ್ಲಿ 186 ಅಗ್ನಿಶಾಮಕ ಠಾಣೆಗಳು ಕಾರ್ಯನಿರ್ವಹಿಸುತ್ತಿದ್ದು, ಸರ್ಕಾರದಿಂದ ಮಂಜೂರಾಗಿ ಪ್ರಾರಂಭವಾಗದೇ ಇರುವ 26 ಅಗ್ನಿಶಾಮಕ ಠಾಣೆಗಳನ್ನು ಉಳಿದ 20 ತಾಲ್ಲೂಕುಗಳಲ್ಲಿ ಪ್ರಾರಂಭಿಸಬೇಕಾಗಿದೆ. ಈ ದಿಸೆಯಲ್ಲಿ ಮಂಜೂರಾದ ಎಲ್ಲಾ ಅಗ್ನಿಶಾಮಕ ಠಾಣೆಗಳನ್ನು ತರೆದ ನಂತರ ಬೆಟ್ಟದ ಪುರದಲ್ಲಿನ ಕೈಗಾರಿಕಾ ಬೆಳವಣಿಗೆ ಹಾಗೂ ಅಗ್ನಿ ಅನಾಹುತಗಳನ್ನು ಪರಿಶೀಲಿಸಿ,

ಅವಶ್ಯಕತೆಗನುಗುಣವಾಗಿ ಅಗ್ನಿಶಾಮಕ ಠಾಣೆಯನ್ನು ಸ್ಥಾಪಿಸಲು ಕ್ರಮಕೈಗೊಳ್ಳಲಾಗುವುದು.

ಶ್ರೀ ಕೆ.ವೆಂಕಟೇಶ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಪೊಲೀಸ್ ಇಲಾಖೆಗೆ ಎಲ್ಲಾ ತಾಲ್ಲೂಕುಗಳಲ್ಲಿಯೂ ಪೊಲೀಸ್ ಸ್ಟೇಷನ್ ಮಾಡಬೇಕೆಂಬ ಬಗ್ಗೆ ನಿಯಮ ಇರಬಹುದು. ಅದರಲ್ಲಿ ನಮ್ಮದು ಬಹಳ ವಿಶೇಷ ಇದೆ. ಕಾರಣವೇನೆಂದರೆ, ನಮ್ಮಲ್ಲಿ ಹೊಗೆಸೊಪ್ಪನ್ನು ಹದ ಮಾಡುವುದಕ್ಕೆ 58,000 ಬ್ಯಾರನ್‌ಗಳು ಇವೆ, ಹೊಗೆಸೊಪ್ಪನ್ನು ಹದಮಾಡುವ ಬಗ್ಗೆ ಗೃಹ ಮಂತ್ರಿಗಳಿಗೆ ತಮ್ಮ ಇಲಾಖೆಗೆ ಗೊತ್ತಿದೆಯೋ ಏನೋ ನನಗೆ ಗೊತ್ತಿಲ್ಲ. ಈ ಬಗ್ಗೆ ಪೊಲೀಸ್‌ನವರಿಗೂ ಗೊತ್ತಿಲ್ಲ. ಬೆಂಕಿಯಿಂದ ಹೋಗೆ ಸೊಪ್ಪನ್ನು ಹದ ಮಾಡುತ್ತಾರೆ. ಪಿರಿಯಾಪಟ್ಟಣ headquarters ನಿಂದ ಒಂದು ಕೊನೆಯ ಹಳ್ಳಿಗೆ ಹೋಗಬೇಕಾದರೆ ಸುಮಾರು 75 ಕಿ.ಮೀ. ಆಗುತ್ತದೆ. ಬೆಟ್ಟದ ಪುರದಲ್ಲಿ ಪ್ರತಿವರ್ಷ ಸುಮಾರು 20ರಿಂದ 30 ರೈತರ ಬ್ಯಾರನ್‌ಗಳು ಬೆಂದು ಹೋಗಿ ಇದರಿಂದ ರೈತರಿಗೆ ಲಕ್ಷಾಂತರ ರೂಪಾಯಿಗಳು ನಷ್ಟವಾಗುತ್ತಿದೆ. ಅಗ್ನಿಶಾಮಕ ಠಾಣೆಯನ್ನು ಬೆಟ್ಟದಪುರದಲ್ಲಿ ಮಾಡುವುದರಿಂದ ಅಲ್ಲಿ distance ಬಹಳ ದೂರ ಇರುವುದರಿಂದ ರೈತರಿಗೆ ಅನುಕೂಲವಾಗುತ್ತದೆ ಅದು ಪಿರಿಯಾಪಟ್ಟಣ headquarters ನಲ್ಲಿರುವುದು ನಿಜ. ಇದು ಬಹಳ ತುರ್ತಾಗಿ ಆಗಬೇಕಾಗಿದೆ. ಬೇರೆ ತಾಲ್ಲೂಕುಗಳಲ್ಲಿ ಮಾಡಬೇಡಿ ಎಂದು ಹೇಳುವುದಿಲ್ಲ. ಅಲ್ಲಿಯೂ ಮಾಡಿ. ಆದರೆ ಬೆಟ್ಟದಪುರದಲ್ಲಿ ಬಹಳ ಅಗತ್ಯವಿದೆ. ಆದ್ದರಿಂದ ಅಗ್ನಿಶಾಮಕ ಠಾಣೆಯನ್ನು ಅಲ್ಲಿ ಮಾಡಬೇಕೆಂದು ಹೇಳುತ್ತಿದ್ದೇವೆ. ಮಾನ್ಯ ಮಂತ್ರಿಗಳಿಗೆ ಅಲ್ಲಿ ಏತಕ್ಕಾಗಿ Fire Station ಬೇಕೆಂದು ಗೊತ್ತಿರುವುದಿಲ್ಲ. ಈ ಕಾರಣದಿಂದ ಅಲ್ಲಿ Fire Station ನ ಆವಶ್ಯಕತೆ ಇದೆ.

ಶ್ರೀ ಕೆ.ಜೆ.ಜಾರ್ಜ್ : ಮಾನ್ಯ ಅಧ್ಯಕ್ಷರೆ, ಪಿರಿಯಾಪಟ್ಟಣದಲ್ಲಿ ತಂಬಾಕನ್ನು ಹದ ಮಾಡುವಾಗ ಬೆಂಕಿ ಇಟ್ಟು ಮಾಡುತ್ತಾರೆಂದು ನಮಗೆ ಗೊತ್ತಿದೆ. ಆದರೆ ಈಗಾಗಲೇ 20 ತಾಲ್ಲೂಕುಗಳಿಗೆ ಸರ್ಕಾರದಿಂದ ಅನುಮತಿಯನ್ನು ಕೊಟ್ಟಿದ್ದೇವೆ. 29 ಅಗ್ನಿಶಾಮಕ ಠಾಣೆಯನ್ನು ತೆರೆಯಲು ಮಂಜೂರಾತಿ ಆಗಿದೆ. ಅಲ್ಲಿ ಆದ್ಯತೆ ನಮಗೆ ಗೊತ್ತಿದೆ. ಬಹುಶಃ ಈ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರು ಈ ಬಜೆಟ್‌ನಲ್ಲಿ ಸ್ವಲ್ಪ ಹಣಕಾಸನ್ನು ಒದಗಿದರೆ ಬೆಟ್ಟದಪುರದಲ್ಲಿ ಅಗ್ನಿಶಾಮಕ ಠಾಣೆಯನ್ನು ತೆರೆಯುವುದನ್ನೂ ಸಹ ತೆಗೆದುಕೊಳ್ಳಬಹುದು.

ಶ್ರೀ ಕೆ.ವೆಂಕಟೇಶ್ : ಅಲ್ಲಿ ಬಹಳ ಅಗತ್ಯವಿದೆ. ಇದು ಬಹಳ ವಿಶೇಷವಾದ ಪ್ರಕರಣವಾಗಿದೆ. ಇಲ್ಲಿ ಅಗ್ನಿಶಾಮಕ ಠಾಣೆಯನ್ನು ತೆರೆಯುವುದರಿಂದ ಮೂರು ತಾಲ್ಲೂಕುಗಳಿಗೂ ಸಹ ಅನುಕೂಲವಾಗುತ್ತದೆ. ಕೆ.ಆರ್. ನಗರ, ಹುಣಸೂರು ತಾಲ್ಲೂಕುಗಳಿಗೂ ಸಹ ಅನುಕೂಲವಾಗುತ್ತದೆ. ಇದರಿಂದ ರೈತರಿಗೆ ಆಗುವಂತಹ ನಷ್ಟವನ್ನು ತುಂಬುವುದಕ್ಕೆ ಸಾಧ್ಯವಿದೆ. ಪ್ರತಿ ವರ್ಷ 20 ರಿಂದ 30 ಬ್ಯಾರನ್‌ಗಳು ಬೆಂದು ಹೋಗುತ್ತದೆ.

ಅಧ್ಯಕ್ಷರು : ಮಾನ್ಯ ವೆಂಕಟೇಶ್‌ರವರೆ, in principle ಮಾನ್ಯ ಸಚಿವರು ಒಪ್ಪಿಕೊಂಡಿದ್ದಾರೆ.

ಶ್ರೀ ಕೆ.ವೆಂಕಟೇಶ್ : ಇಲ್ಲಿ ನಾನು ಹೇಳುವುದೇನೆಂದರೆ, ಅಲ್ಲಿ ಅಗ್ನಿಶಾಮಕ ಠಾಣೆಯನ್ನು ಮಾಡುತ್ತೇವೆಂದು ಮಾತ್ರ ಹೇಳಲಿ.

ಶ್ರೀ ಕೆ.ಜೆ.ಜಾರ್ಜ್ : ನಮಗೆ ಲ್ಯಾಂಡ್ ಕೊಡಿಸಿ, ಅಲ್ಲಿ ಅದ್ಯತೆಯ ಮೇರೆ ತೆಗೆದುಕೊಳ್ಳುತ್ತೇವೆ.

ಶ್ರೀ ಕೆ.ವೆಂಕಟೇಶ್ : ಅಲ್ಲಿ ಸರ್ಕಾರಿ ಜಾಗವು ಸಹ ಇದೆ.

ಅಧ್ಯಕ್ಷರು : ಆಯಿತು. O.K.

ಪ್ರಶ್ನೆ ಸಂಖ್ಯೆ : 37(609)
ಶ್ರೀ ಮುನಿರತ್ನ (ರಾಜರಾಜೇಶ್ವರಿ ನಗರ)
ಮಾನ್ಯ ಸದಸ್ಯರು ಗೈರು ಹಾಜರಾಗಿದ್ದರು.

ಅಧ್ಯಕ್ಷರು : ರವಿ ಸುಬ್ರಮಣ್ಯ ನಿಮ್ಮ ಪ್ರಶ್ನೆಗೆ ಕಾಲಾವಕಾಶ ಕೇಳಿದ್ದಾರೆ.

ಶ್ರೀ ರವಿ ಸುಬ್ರಮಣ್ಯ : ಮಾನ್ಯ ಅಧ್ಯಕ್ಷರೆ, ನಾನು ಯಾವಾಗ ಪ್ರಶ್ನೆಯನ್ನು ಕೇಳಿದರೂ ಕಾಲಾವಕಾಶವನ್ನು ಕೇಳುವುದೇ ಆಗುತ್ತಿದೆ. ಬೆಳಗಾವಿ ಅಧಿವೇಶನದಲ್ಲಿ ಕೇಳಿದ ಪ್ರಶ್ನೆಗಳಿಗೆ ಇದುವರೆಗೆ ಯಾವುದೇ ಉತ್ತರ ಬಂದಿಲ್ಲ. ಮೊನ್ನೆ ಪ್ರಶ್ನೆ ಕೇಳಿದ್ದಕ್ಕೆ 15 ದಿವಸಗಳ ಕಾಲಾವಕಾಶ ಕೇಳಿದ್ದಾರೆ. ಪ್ರಶ್ನೆಗಳು star ಆಗುವುದೇ ಕಷ್ಟ, ಸಾವಿರಾರು ಕೋಟಿ ರೂಪಾಯಿಗಳು ಬೆಂಗಳೂರು ಮಹಾನಗರ ಪಾಲಿಕೆಯ, ಬಿಡಿಎ ಆಸ್ತಿಗಳು ಸರಿಯಾಗಿ ಉಪಯೋಗ ವಾಗುತ್ತಿಲ್ಲ.

ಅಧ್ಯಕ್ಷರು : ಆಯಿತು, ಈ ಸಾರಿ ಸಮಯ ಕಡಿಮೆ ಇರುವುದರಿಂದ ಈ ರೀತಿ ತೊಂದರೆ ಆಗಿ ಬಿಟ್ಟಿದೆ. ಇದಾದ ಮೇಲೆ ನೋಡಿಕೊಳ್ಳೋಣ. ನಿಮಗೆ ಉತ್ತರವನ್ನು ಕಳುಹಿಸಿ ಕೊಡುವ ಪ್ರಯತ್ನವನ್ನು ಖಂಡಿತ ಮಾಡುತ್ತೇವೆ.

ಶ್ರೀ ರವಿ ಸುಬ್ರಮಣ್ಯ : ಬೆಳಗಾವಿ ಅಧಿವೇಶನದಲ್ಲಿ ನಮಗೆ ಇಲ್ಲಿ ಚರ್ಚೆ ಮಾಡಲಿಕ್ಕೆ ಅವಕಾಶ ಕಲ್ಪಿಸಿಕೊಡುತ್ತೇವೆಂದು ಹೇಳಿದ್ದಿರಿ, ನಮಗೆ ಇಲ್ಲಿ ಅವಕಾಶಗಳೂ ಸಹ ಸಿಗುತ್ತಿಲ್ಲ. ಬೆಂಗಳೂರಿನಲ್ಲಿ 23 ಅಸೆಂಬ್ಲಿ ಕ್ಷೇತ್ರಗಳಿವೆ. ಸುಮಾರು 15% ಜನ ಎಂ.ಎಲ್.ಎ.ಗಳು ಬೆಂಗಳೂರಿನಿಂದ ಆರಿಸಿ ಬರುತ್ತೇವೆ. ಬೆಂಗಳೂರಿನ ಸಮಸ್ಯೆಗಳ ಬಗ್ಗೆ ಚರ್ಚೆ ಮಾಡಲಿಕ್ಕೆ ನಮಗೆ ಯಾವುದೇ ರೀತಿ ಅವಕಾಶ ಸಿಗುತ್ತಿಲ್ಲ. ದಯಮಾಡಿ ನಮಗೆ ಅವಕಾಶ ಕೊಡಿ.